ಸಾಕ್ಷಿಯನ್ನು ದಿನಾಂಕ 28.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಕೆ ಆರ್ ವಕೀಲರಿಂದಃ**

ನಾನು ಈ ದಾವೆಯ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತದೆ ಮತ್ತು ಅದಕ್ಕೆ ನಾನು ನನ್ನ ಸಹಿ ಹಾಕಿರುತ್ತೇನೆ.

ದಾವಾ ಆಸ್ತಿಯ 14 ಪುಟದ ಪಹಣಿ ಪತ್ರಿಕೆಗಳನ್ನು ಒಟ್ಟಾಗಿ ನಿಪಿ-1 ಎಂದು, ವಂಶವೃಕ್ಷವನ್ನು ನಿಪಿ-2 ಎಂದು, ದಾವಾ ಆಸ್ತಿಯ ವಿದ್ಯುತ್ಶಕ್ತಿ ಬಿಲ್ ನ್ನು ನಿಪಿ-3 ಎಂದು, ದಿಃ 18.08.2020 ಮತ್ತು 09.06.2010 ರ ದಾನ ಪತ್ರದ ದೃಢೀಕೃತ ನಕಲನ್ನು ನಿಪಿ-4 ಮತ್ತು 5 ಎಂದು, ದಿಃ 18.04.2013 ರ ದಾನ ರದ್ದಾಯಿತಿ ಪತ್ರದ ದೃಢೀಕೃತ ನಕಲನ್ನು ನಿಪಿ-6 ಎಂದು, ದಿಃ 18.04.2013 ರ ದಾನ ಪತ್ರದ ದೃಢೀಕೃತ ನಕಲನ್ನು ನಿಪಿ-7 ಎಂದು, ಡಿಮಾಂಡ್ ರಿಜಿಸ್ಟರ್ ನ್ನು ನಿಪಿ- 8 ಎಂದು, ತೆರಿಗೆ ಪಾವತಿ ರಸೀದಿಯನ್ನು ನಿಪಿ-9 ಎಂದು, ಡಿಮಾಂಡ್ ರಿಜಿಸ್ಟರ್ ನಿಪಿ-10 ಎಂದು ದಾವಾ ನಂ. 104/2010 ರ ಆದೇಶದ ಪುಟ, ವಾದ ಪತ್ರದ ಮತ್ತು ರಾಜಿ ಅರ್ಜಿಯನ್ನು ಹಾಗೂ ಡಿಕ್ರಿಯ ದೃಢೀಕೃತ ನಕಲನ್ನು ನಿಪಿ-11 ರಿಂದ 14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತು 2ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ ಮತ್ತು 3ನೇ ಪ್ರತಿವಾದಿ ಏಕತರ್ಪಿಯಾಗಿರುತ್ತಾರೆ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್
ಗುಂಡ್ಲುಪೇಟೆ